**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

ದಿನಾಂಕ: 21-06-2017

ಸಂಖ್ಯೆ:ಪಪೂಶಿ/ಶೈಶಾ-04/ದಾ.ಸು-03/2017-18

**ಸುತ್ತೋಲೆ**

ವಿಷಯ: ರಾಜ್ಯದ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಂಡ ಶುಲ್ಕವಿಲ್ಲದೇ ದಾಖಲಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ವಿದ್ಯಾರ್ಥಿಗಳ ಹಾಗೂ ಪೋಷಕರ ಮನವಿ.

****

2017-18ನೇ ಶೈಕ್ಷಣಿಕ ಸಾಲಿಗೆ ದ್ವಿತೀಯ ಪಿಯುಸಿ ತರಗತಿಗೆ 20-06-2017ರವರೆಗೆ ದಂಡ ಶುಲ್ಕವಿಲ್ಲದೇ ದಾಖಲಾತಿಗೆ ಕೊನೆಯ ದಿನಾಂಕವನ್ನು ತಿಳಿಸಿಲಾಗಿತ್ತು. ಉಲ್ಲೇಖಿತ ಪತ್ರದಂತೆ ಬಹಳಷ್ಟು ವಿದ್ಯಾರ್ಥಿಗಳು ಸಕಾಲದಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗಿಲ್ಲದ ಕಾರಣ ಪ್ರವೇಶ ದಿನಾಂಕವನ್ನು ಮುಂದೂಡಲು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ, ಅದರಂತೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ದಾಖಲಾತಿ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಲಾಗಿದೆ:

| ತರಗತಿ | ದಂಡ ಶುಲ್ಕವಿಲ್ಲದೆ ದಾಖಲಾತಿ ಕೊನೆಯ ದಿನಾಂಕ | ವಿಳಂಬ ದಾಖಲಾತಿ ರೂ. 504/- (ಐದುನೂರು ನಾಲ್ಕು) ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿವೆ) | ವಿಶೇಷ ದಂಡ ಶುಲ್ಕ ರೂ.2184/-(ರೂ 1680/- ಒಂದು ಸಾವಿರದ ಆರು ನೂರು ಎಂಭತ್ತು + ರೂ:504/- ಐದು ನೂರ ನಾಲ್ಕು ಮಾತ್ರ) ಎರಡೂ ದಿನಗಳು ಸೇರಿವೆ |
|---|---|---|---|
| ದ್ವಿತೀಯ ಪಿಯುಸಿ | 30-06-2017 | 01-07-2017 ರಿಂದ 10-07-2017 ರವರೆಗೆ | 11-07-2017 ರಿಂದ 21-07-2017 ರವರೆಗೆ |
| ವಿಶೇಷ ಸೂಚನೆ:- ಸೂಚಿತ ದಿನಾಂಕಗಳಲ್ಲಿ ದಾಖಲಾಗುವ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ವಾರ್ಷಿಕ ಶೇ 75%ರಷ್ಟು ಹಾಜರಾತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. | | | |

21/6

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ

1. ಜಿಲ್ಲಾ ಉಪನಿರ್ದೇಶಕರು,ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಮುಂದಿನ ಕ್ರಮಕ್ಕಾಗಿ
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಗಮನಕ್ಕೆ ತರಲು, ಜಿಲ್ಲಾ ಉಪನಿರ್ದೇಶಕರ ಮೂಲಕ ಮುಂದಿನ ಕ್ರಮಕ್ಕಾಗಿ.
3. ಜಂಟಿ ನಿರ್ದೇಶಕರು, (ಪರೀಕ್ಷೆ/ಆಡಳಿತ/ಶೈಕ್ಷಣಿಕ/ ಮಾನ್ಯತೆ/RIDF) ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ..
4. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
5. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
6. ಕಛೇರಿ ಪ್ರತಿ